<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ.ಸಂಖ್ಯೆಃ **124/2024**</u>

<u>ಪಿರ್ಯಾದಿ</u> : ಶ್ರೀ ಹೆಚ್.ಬಿ.ಲೋಕಪ್ಪಗೌಡ,
ವಯಸ್ಸು ಸುಮಾರು 70 ವರ್ಷ,
ಬಿನ್ ಬಸವೇಗೌಡ,
ಕಾಫೀ ಪ್ಲಾಂಟರ್,
ವಾಸಃ ಮಗ್ಗಲಮಕ್ಕಿ ಗ್ರಾಮ,
ಜೋಗಣ್ಣನಕೆರೆ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

<u>ಆರೋಪಿ</u> : ಶ್ರೀ ಕಾಯಣ್ಣನವರ ಹುಲಿಗೇಶ್,
ವಯಸ್ಸು ಸುಮಾರು 36 ವರ್ಷ,
ಬಿನ್ ಹಾಲಪ್ಪ, ವಾಸಃ A/440,
ಎ.ಕೆ.ಕಾಲೋನಿ, ಅಂಬೇಡ್ಕರ್ ನಗರ,
ಹಿರೇಹಡಗಲಿ ಅಂಚೆ, ಹಡಗಲಿ ತಾಲ್ಲೂಕು,
ಬಳ್ಳಾರಿ ಜಿಲ್ಲೆ.

<u>ಆಪಾದನೆಯ ಸಾರಾಂಶ</u>

ಶ್ರೀ ವಿಶ್ವನಾಥ್.ಎ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಪಿರ್ಯಾದುದಾರರು ಕಾಫೀ ಪ್ಲಾಂಟರ್ ಆಗಿದ್ದು, ಸದರಿ ಯವರು ಕಾಫೀ ತೋಟವನ್ನು ಹೊಂದಿದ್ದು, ಆರೋಪಿಯಾದ ನೀವು ತೋಟಗಳಿಗೆ ಕೆಲಸಗಾರರನ್ನು ಪೂರೈಸುವವರಾಗಿದ್ದು, ಪಿರ್ಯಾದಿಯನ್ನು ನೀವು ಸಂಪರ್ಕಿಸಿ, ಅವರ ತೋಟಕ್ಕೆ ಕೆಲಸ ಮಾಡಲು ಕೆಲಸಗಾರರನ್ನು ಪೂರೈಸುವುದಾಗಿ ಪಿರ್ಯಾದಿಯಿಂದ ಮುಂಗಡವಾಗಿ ರೂ.3,00,000/- ಹಣವನ್ನು ಪಡೆದು, ನಂತರ ಕೆಲಸಗಾರರನ್ನು ಪೂರೈಸಲು ವಿಫಲರಾದ ಕಾರಣ ಸದರಿ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಐಡಿಎಫ್ಸಿ ಫಸ್ಟ್ ಬ್ಯಾಂಕ್, ಹೂವಿನಹಡಗಲಿ ಶಾಖೆಯ ಚೆಕ್ ಸಂ.000015, ದಿನಾಂಕ 10.12.2023, ರೂ.3,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಬ್ಯಾಂಕ್ ಆಫ್ ಬರೋಡಾ, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು

ದಿನಾಂಕ 12.01.2024 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ*?*

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ*?* ಅದು ನಿಮಗೆ ಅರ್ಥವಾಯಿತೇ*?*

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ*?*

ಆರೋಪಿಯ ಉತ್ತರಃ

*(*ಆರೋಪಿಗೆ ದಿನಾಂಕ 25.10.2025 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ*)*

**Sd/-**

ಮೂಡಿಗೆರೆ
ದಿನಾಂಕಃ 25.10.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.